05 November 2026

To,

BSE Limited
Phiroze Jeejeebhoy Towers,
Dalal Street,
Mumbai- 400 001
Scrip Code: 543260

National Stock Exchange of India Ltd.
Exchange Plaza, Plot no. C/1, G Block,
Bandra-Kurla Complex
Bandra (E), Mumbai - 400 051
NSE Symbol: STOVEKRAFT

Dear Sir / Madam,

Sub: Newspaper Publication

Please find enclosed herewith copies of newspaper publication of Consolidated Unaudited Financial Results for the quarter and half year ended 30 September 2026 published in the following newspapers:

1. Vijay Karnataka (Regional Newspaper) on 05 November 2026.
2. Business Line (National Newspaper) on 05 November 2026.

Kindly take the same on the record.

Thanking you,

Yours faithfully
For Stove Kraft Limited

SHRINIVAS PRANESHACHARYA HARAPANAHALLI

Digitally signed by SHRINIVAS PRANESHACHARYA HARAPANAHALLI
Date: 2026.11.05 14:06:36 +05'30'

Shrinivas P Harapanahalli
Company Secretary & Compliance Officer

ಬೆಳಗಾವಿ ಸನಿಹಕ್ಕೆ ಬಂದ ಜೈಲ್ ಭರೋ ಚಳವಳಿ ಪಾದಯಾತ್ರೆ

ರೈತರ ಪ್ರತಿಭಟನೆ ತೀವ್ರ

■ **ವಿಕ ಸುದ್ದಿಲೋಕ** ಬೆಳಗಾವಿ

ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಗುರ್ಲಾಪುರ ಕ್ರಾಸ್‌ನಿಂದ ಆರಂಭಗೊಂಡ ರೈತರ ಜೈಲ್ ಭರೋ ಚಳವಳಿಯ ಪಾದಯಾತ್ರೆ ಬುಧವಾರ ಬೆಳಗಾವಿಯ ಸನಿಹಕ್ಕೆ ಬಂದು ತಲುಪಿದೆ.

ಹುಕ್ಕೇರಿ ತಾಲೂಕಿನ ಬಡಕುಂದ್ರಿಯ ಹೊಳೆಮ್ಮ ದೇವಿ ದೇವಸ್ಥಾನದ ಬಳಿ ಬುಧವಾರ ಬೆಳಗ್ಗೆ ಪಾದಯಾತ್ರೆ ಆರಂಭವಾಗುವ ವೇಳೆ ಚಂದ್ರಶೇಖರ ಸ್ವಾಮೀಜಿ ಅವರು ಹಿರಣ್ಯಕೇಶಿ ನದಿಗೆ ಪೂಜೆ ಸಲ್ಲಿಸಿ, ರೈತರಿಗೆ ನ್ಯಾಯ ಸಿಗಲಿ ಎಂದು ಪ್ರಾರ್ಥಿಸಿದರು.

ರೈತ ಸಂಘದ ನಾಯಕಿ ಚುಕ್ಕಿ ನಂಜುಂಡಸ್ವಾಮಿ ಮಾತನಾಡಿ, ''ಈ ಪ್ರತಿಭಟನೆಯಲ್ಲಿ ಮಕ್ಕಳನ್ನು ಹಿಡಿದು ವೃದ್ಧರವರೆಗೆ ಎಲ್ಲರೂ ಪಾಲ್ಗೊಂಡಿದ್ದಾರೆ. ಮಹಿಳೆಯರು ಬುತ್ತಿ ತಂದು ಊಟ ಬಡಿಸಿ ಬೆಂಬಲ ಸೂಚಿಸುತ್ತಿದ್ದಾರೆ. ಮುಖ್ಯಮಂತ್ರಿ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಟನ್ ಕಬ್ಬಿಗೆ 1,000 ರೂ. ಪ್ರೋತ್ಸಾಹ ಧನ ಘೋಷಿಸಬೇಕು,'' ಎಂದು ಒತ್ತಾಯಿಸಿದರು.

ಟೋಲ್ ನಾಕಾದಲ್ಲಿ ಪ್ರತಿಭಟನೆ: ಸಂಜೆ ಹತ್ತರಗಿ ಟೋಲ್ ನಾಕಾ ತಲುಪಿದ ಹೋರಾಟಗಾರರು ಕೆಲ ಸಮಯ ಪ್ರತಿಭಟನೆ ನಡೆಸಿದರು. ಬಳಿಕ ರಾಷ್ಟ್ರೀಯ ಹೆದ್ದಾರಿಯ ಒಂದು ಬದಿಯಲ್ಲಿ ನಡೆಯುತ್ತ ಬೆಳಗಾವಿ ಯತ್ತ ಸಾಗಿದರು. ಬುಧವಾರ ರಾತ್ರಿ ಭೂತರಾಮನ ಹಟ್ಟಿಯ ಮುಕ್ತಿಮಠದಲ್ಲಿ ವಾಸ್ತವ್ಯ ಮಾಡಿ, ಗುರುವಾರ ಬೆಳಗ್ಗೆ ಹಿಂಡಲಗಾ ಜೈಲಿನತ್ತ ತೆರಳಲಾಗುವುದಾಗಿ ರೈತ ಮುಖಂಡರು ತಿಳಿಸಿದ್ದಾರೆ. ಈ ನಡುವೆ ರಾಜ್ಯದ ರೈತರ ಹೋರಾಟಕ್ಕೆ ಮಹಾರಾಷ್ಟ್ರದ ಕಬ್ಬು ಬೆಳೆಗಾರರಿಂದಲೂ ಬೆಂಬಲ ವ್ಯಕ್ತವಾಗುತ್ತಿದೆ. ಮಹಾರಾಷ್ಟ್ರದ ಕಿಣಿ ಟೋಲ್ ನಾಕಾ ಸೇರಿ ಗಡಿಭಾಗದ ನಾನಾ ಕಡೆ ಅಲ್ಲಿನ ರೈತರು ಪ್ರತಿಭಟನೆ ನಡೆಸಿದ್ದಾರೆ.

ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆ: ಮಂಗಳವಾರದ ಸಭೆಯಲ್ಲಿ ಕಾರ್ಖಾನೆಗಳು ಹೇಳಿದ ದರಕ್ಕೆ (ಮೊದಲ ಕಂತಿನಲ್ಲಿ 3,500) ರೈತರು ಒಪ್ಪಿರಲಿಲ್ಲ, ಮೊದಲ ಕಂತಿನಲ್ಲಿ ಕನಿಷ್ಠ 4,500 ರೂ.ಕೊಡಲೇಬೇಕು ಎಂದು ಪಟ್ಟು ಹಿಡಿದಿದ್ದರು. ಬುಧವಾರ ಮಧ್ಯಾಹ್ನ ದರದ ವಿಚಾರ ಹೇಳುವುದಾಗಿ ಕಾರ್ಖಾನೆಗಳ ಪ್ರತಿನಿಧಿಗಳು ಹೇಳಿದ್ದರು. ಆದರೆ, ಸಂಜೆ 7 ಗಂಟೆಯಾದರೂ ಯಾವುದೇ ಮಾಹಿತಿ ಸಿಗಲಿಲ್ಲ, ಇದರಿಂದ ಬೇಸರಗೊಂಡ ರೈತರು ಬೆಳಗಾವಿ ನಗರದ ರಾಣಿ ಚನ್ನಮ್ಮ ವೃತ್ತದಲ್ಲಿ ಕೆಲಕಾಲ ಪ್ರತಿಭಟನೆ ಮಾಡಿದರು.



ಹುಕ್ಕೇರಿ ತಾಲೂಕಿನ ಹತ್ತರಗಿ ಟೋಲ್ ನಾಕಾದಲ್ಲಿ ಬುಧವಾರ ಪ್ರತಿಭಟನೆ ನಡೆಸಿದ ರೈತರು.

ಡಿಸಿ ಕಚೇರಿಗೆ ಬೀಗ ಹಾಕಲು ಯತ್ನ



ಬುಧವಾರ ಮತ್ತೊಂದು ಸುತ್ತಿನ ಸಭೆ ನಡೆಸುವುದಾಗಿ ಹೇಳಿದ್ದರಿಂದ ರೈತ ಮುಖಂಡ ಗಣೇಶ ಇಳಿಗೇರ್ ನೇತೃತ್ವದಲ್ಲಿ ಬೆಳಗ್ಗೆಯೇ ಡಿಸಿ ಕಚೇರಿ ಎದುರು ಜಮಾಯಿಸಿ, ಸಭೆಗಾಗಿ ಕಾಯುತ್ತಿದ್ದರೂ ಅಧಿಕಾರಿಗಳು ಸ್ಪಂದಿಸಿಲ್ಲ. ಕಬ್ಬಿನ ದರ ನಿಗದಿ ವಿಚಾರದಲ್ಲಿ ಅಧಿಕಾರಿಗಳು ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ ರೈತರು ಮಧ್ಯಾಹ್ನ ಜಿಲ್ಲಾಧಿಕಾರಿ ಕಚೇರಿಗೆ ಬೀಗ ಹಾಕಲು ಯತ್ನಿಸಿದರು. ರೈತರು ಹಾಗೂ ಪೊಲೀಸರ ನಡುವೆ ವಾಗ್ವಾದ, ನೂಕಾಟ ನಡೆಯಿತು. ಈ ವೇಳೆ ಮಹಿಳೆಯೊಬ್ಬರಿಗೆ ಸಣ್ಣಪುಟ್ಟ ಗಾಯಗಳಾದವು. ಕೊಟ್ಟ ಮಾತಿನಂತೆ ಸಭೆ ನಡೆಸಿ ಕಬ್ಬಿನ ದರ ನಿಗದಿಪಡಿಸಬೇಕು ಎಂದು ರೈತರು ಆಗ್ರಹಿಸಿದರು.

2ನೇ ದಿನವೂ ಸರಣಿ ಸಭೆ

ಮಂಗಳವಾರ ನಡೆದ ಸಭೆಯಲ್ಲಿ 3500 ರೂ. ನೀಡಲು ಒಪ್ಪಿಕೊಂಡಿದ್ದ ಸಕ್ಕರೆ ಕಾರ್ಖಾನೆಗಳ ಮಾಲೀಕರೊಂದಿಗೆ ಜಿಪಂ ಸಿಇಒ ಅವರ ನಿವಾಸದಲ್ಲಿ ಬುಧವಾರ ಮತ್ತೊಂದು ಸುತ್ತಿನ ಸಭೆ ನಡೆಯಿತು. ಈ ಸಭೆ ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಸಚಿವರು, ಸಭೆಯ ಚರ್ಚೆಗಳ ಕುರಿತು ಪ್ರಭಾರಿ ಜಿಲ್ಲಾಧಿಕಾರಿ ರಾಹುಲ್ ಶಿಂಧೆ ಅವರಿಂದ ಮಾಹಿತಿ ಪಡೆದು, ರೈತ ಮುಖಂಡರೊಂದಿಗೆ ಪ್ರತ್ಯೇಕ ಸಭೆ ನಡೆಸಿದರು. ''ಕಬ್ಬು ಈಗಾಗಲೇ ಒಣಗುತ್ತಿದ್ದು, ನೀರಾವರಿ ಇಲ್ಲದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಸದ್ಯಕ್ಕೆ ಕಾರ್ಖಾನೆಗಳು ನೀಡುತ್ತಿರುವ ದರ ಒಪ್ಪಿಕೊಂಡು, ಕಬ್ಬು ನುರಿಸುವಿಕೆಗೆ ಸಹಕರಿಸಿ,'' ಎಂದು ಮನವಿ ಮಾಡಿದರು. ಪ್ರತಿಕ್ರಿಯಿಸಿದ ರೈತರು, ಸಕ್ಕರೆ ಎಂಎಸ್‌ಪಿ ಹೆಚ್ಚಿಸಿದರೆ ಪರಿಷ್ಕೃತ ದರ ನೀಡಬೇಕು ಹಾಗೂ ರಾಜ್ಯ ಸರಕಾರವೂ ಎಸ್‌ಎಸ್‌ಪಿ ನಿಗದಿಪಡಿಸಲೇಬೇಕು ಎಂದು ಒತ್ತಾಯಿಸಿದರು.

ಬೆಳಗಾವಿ ಕಾರ್ಖಾನೆಗಳಿಂದ 3,600 ರೂ.ಗೆ ಅಸ್ತು

> ನಾವು ಟನ್ ಕಬ್ಬಿಗೆ 3,650 ರೂ. ದರಕ್ಕೆ ಬೇಡಿಕೆ ಇಟ್ಟಿದ್ದೇವೆ. 50 ರೂ. ಹೆಚ್ಚು ಕೊಡುವುದೇನೂ ಕಷ್ಟವಲ್ಲ, ಸಚಿವರು ಮತ್ತು ಡಿಸಿ ಗುರುವಾರ ರೈತರ ಹೋರಾಟದ ಸ್ಥಳಕ್ಕೇ ಬಂದು, ಎಲ್ಲರ ಎದುರಲ್ಲೇ ಅಧಿಕೃತ ಆದೇಶ ಪತ್ರ ನೀಡಬೇಕು. ಇಲ್ಲವಾದರೆ ಸಕ್ಕರೆ ಕಾರ್ಖಾನೆ ಆರಂಭಿಸಲು ಬಿಡುವುದಿಲ್ಲ.
>
> - **ಚೂನಪ್ಪ ಪೂಜಾರಿ** ರೈತ ಮುಖಂಡ

ಜಿಲ್ಲೆಯ ಕಾರ್ಖಾನೆಗಳ ಮಾಲೀಕರು ಪ್ರತಿ ಟನ್ ಕಬ್ಬಿಗೆ ಕಟಾವು ಮತ್ತು ಸಾಗಣೆ ದರ ಹೊರತಾಗಿ 3,600 ರೂ. ನೀಡಲು ಒಪ್ಪಿಕೊಂಡಿದ್ದಾರೆ. ರೈತರು ಹೋರಾಟ ಕೈ ಬಿಟ್ಟು ಕಾರ್ಖಾನೆಗಳಲ್ಲಿ ಕಬ್ಬು ನುರಿಸಲು ಸಹಕರಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಮನವಿ ಮಾಡಿದರು.



ಸಚಿವ ಸತೀಶ್ ಜಾರಕಿಹೊಳಿ ಘೋಷಣೆ


ಬುಧವಾರ ರಾತ್ರಿ ಜಿಲ್ಲಾಡಳಿತ ಹಾಗೂ ರೈತರೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''3,600 ರೂ. ದರ ಬೆಳಗಾವಿ ಜಿಲ್ಲೆಗೆ ಮಾತ್ರ ಸೀಮಿತ. ವಿಜಯಪುರ, ಬಾಗಲಕೋಟೆ, ಧಾರವಾಡ ಸೇರಿ ಇತರ ಜಿಲ್ಲೆಗಳಲ್ಲಿ ಕಬ್ಬಿನ ಬೆಲೆ ವಿಚಾರವಾಗಿ ಪ್ರತ್ಯೇಕ ವ್ಯವಸ್ಥೆಯಿದೆ. ಬೆಳಗಾವಿ ಜಿಲ್ಲೆಯ ರೈತರಿಗೆ ಕಟಾವು ಮತ್ತು ಸಾಗಣೆ ವೆಚ್ಚದ ಹೊರತಾಗಿ 3,600 ರೂ. ಪಾವತಿಸಲು ಹಾಗೂ ಭವಿಷ್ಯದಲ್ಲಿ ಕೇಂದ್ರ ಸರಕಾರ ಸಕ್ಕರೆ ಎಂಎಸ್‌ಪಿ ಹೆಚ್ಚಿಸಿದರೆ ಅದಕ್ಕೆ ಅನುಗುಣವಾಗಿ ರೈತರಿಗೆ ನ್ಯಾಯಯುತ ಬೆಲೆ ಒದಗಿಸುವ ವಿಚಾರದಲ್ಲಿಯೂ ಕಾರ್ಖಾನೆಗಳ ಮಾಲೀಕರು ಒಪ್ಪಿಕೊಂಡಿದ್ದಾರೆ. ಸದ್ಯ ದರದ ವಿಚಾರದಲ್ಲಿ ಒಮ್ಮತ ಮೂಡಿದೆ,'' ಎಂದರು.

''ಸಕ್ಕರೆ ಕನಿಷ್ಠ ಮಾರಾಟ ಬೆಲೆ (ಎಂಎಸ್‌ಪಿ) ಹೆಚ್ಚಳ ಹಾಗೂ ರಾಜ್ಯ ಮತ್ತು ಕೇಂದ್ರ ಸರಕಾರಗಳಿಂದ ಪ್ರೋತ್ಸಾಹಧನ ಪಡೆಯುವ ವಿಚಾರಗಳು ಪ್ರತ್ಯೇಕ ವಿಷಯಗಳಾಗಿವೆ. ಈ ಬೇಡಿಕೆಗಳ ಈಡೇರಿಕೆಗಾಗಿ ರೈತರು ಹೋರಾಟ ಮುಂದುವರಿಸಬಹುದು. ಅದಕ್ಕೆ ನಮ್ಮ ಸಹಕಾರವೂ ಇರಲಿದೆ. ಸಭೆಯಲ್ಲಿ ರೈತ ಮುಖಂಡರಾದ ಚೂನಪ್ಪ ಪೂಜಾರಿ ಮತ್ತು ಶಶಿಕಾಂತ ಗುರೂಜಿ ಅವರು ಒಪ್ಪಿಗೆ ಸೂಚಿಸಿದ್ದಾರೆ. ಗುರುವಾರ ಹಮ್ಮಿಕೊಂಡಿರುವ ಜೈಲ್ ಭರೋ ಚಳವಳಿ ಕೈಬಿಟ್ಟು ಕಬ್ಬು ನುರಿಸಲು ಸಹಕರಿಸಬೇಕು,'' ಎಂದು ಸಚಿವರು ಕೋರಿದರು.

ಮಂತ್ರಾಲಯದಲ್ಲಿ 'ರಾಘವ ಸರೋವರ ಯೋಜನೆ'ಗೆ ಭೂಮಿಪೂಜೆ

ರಾಯಚೂರು: 'ರಾಘವ ಸರೋವರ ಯೋಜನೆ'ಯ ಭೂಮಿ ಪೂಜೆಯನ್ನು ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ನೆರವೇರಿಸಿದರು. ಈ ವೇಳೆ ಡಾ.ಸಿ.ಎಸ್.ಮಂಜುನಾಥ್, ಹಲವರು ಗಣ್ಯರು, ಭಕ್ತರು ಇದ್ದರು. ಬೆಂಗಳೂರಿನ ಮದನ್ ಪಾಟೀಲ್ ಅವರು ರಾಘವ ಸರೋವರ ಯೋಜನೆಗೆ 25 ಲಕ್ಷ ರೂ.ದೇಣಿಗೆ ನೀಡಿದ್ದಾರೆ.

25 ಎಕರೆ ಭೂಮಿಯಲ್ಲಿ ನಿರ್ಮಿಸುವ ಗುರಿ ಹೊಂದಿರುವ ಈ ಯೋಜನೆ, ಪರಿಸರ ಜಾಗೃತಿ ಮತ್ತು ಸಾರ್ವಜನಿಕ ಯೋಗಕ್ಷೇಮ ಉತ್ತೇಜಿಸುವ ಸೌಲಭ್ಯವನ್ನು ಹೊಂದಿದೆ.



ಮಂತ್ರಾಲಯದಲ್ಲಿ 'ರಾಘವ ಸರೋವರ ಯೋಜನೆ'ಗೆ ರಾಘವೇಂದರ ಸ್ವಾಮಿಗಳ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಯಲ್ಲಮ್ಮನ ಹುಂಡಿಯಲ್ಲಿ ₹ 2.69 ಕೋಟಿ ಕಾಣಿಕೆ

ಉಗರಗೋಳ (ಬೆಳಗಾವಿ): ಯಲ್ಲಮ್ಮನಗುಡ್ಡದಲ್ಲಿ ನಾಲ್ಕು ದಿನ ನಡೆದ ಯಲ್ಲಮ್ಮ ದೇವಿ ದೇವಸ್ಥಾನದ ಹುಂಡಿ ಎಣಿಕೆ ಕಾರ್ಯ ಬುಧವಾರ ಮುಕ್ತಾಯಗೊಂಡಿದ್ದು, 2.69 ಕೋಟಿ ರೂ. ಕಾಣಿಕೆ ಸಂಗ್ರಹವಾಗಿದೆ. 2.34 ಕೋಟಿ ರೂ.ನಗದು, 26.95 ಲಕ್ಷ ರೂ. ಮೌಲ್ಯದ ಮೌಲ್ಯದ ಚಿನ್ನಾಭರಣ, 7.32 ಲಕ್ಷ ರೂ. ಮೌಲ್ಯದ ಬೆಳ್ಳಿ ಆಭರಣವಿದೆ. ಮೇ 7ರಿಂದ ಅಕ್ಟೋಬರ್ 10ರ ಅವಧಿಯಲ್ಲಿ ಈ ಕಾಣಿಕೆ ಸಂಗ್ರಹಗೊಂಡಿದೆ.

ತಿಗಣೆ ತೊಲಗಿಸು ಅಮ್ಮಾ!: ''ಅಮ್ಮಾ ನಮ್ಮ ಮನೆಯಲ್ಲಿ ತಿಗಣೆಗಳಿವೆ. ತಿಗಣೆ ತೊಲಗಿದರೆ ನಿನ್ನ ಗುಡಿಗೆ ಬಂದು ಹಣ್ಣು-ಕಾಯಿ ಮಾಡಿಸುವೆ,'' ಎಂದು ಭಕ್ತರೊಬ್ಬರು ನಿವೇದನೆ ಮಾಡಿಕೊಂಡ ಪತ್ರ ಹುಂಡಿಯಲ್ಲಿ ಸಿಕ್ಕಿದೆ.

ಪೋಕ್ಸೊ ಪ್ರಕರಣ, ಅಪ್ರಾಪ್ತ ಆರೋಪಿ ಬಂಧನ

ಬಾಳೆಹೊನ್ನೂರು (ಚಿಕ್ಕಮಗಳೂರು): ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಅಪ್ರಾಪ್ತನನ್ನು ಬಾಳೆಹೊನ್ನೂರು ಪೊಲೀಸರು ಬಂಧಿಸಿದ್ದಾರೆ. ಅನಾರೋಗ್ಯದ ಕಾರಣ 10 ವರ್ಷದ ವಿದ್ಯಾರ್ಥಿನಿ ಎರಡು ತಿಂಗಳಿನಿಂದ ಶಾಲೆಗೆ ಹೋಗಿರಲಿಲ್ಲ, ಆಕೆಯನ್ನು ಮನೆಯವರು ಚಿಕ್ಕಮಗಳೂರಿನ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಲೈಂಗಿಕ ದೌರ್ಜನ್ಯ ನಡೆದಿರುವ ವಿಷಯ ಬೆಳಕಿಗೆ ಬಂತು.

ವಿದ್ಯಾರ್ಥಿನಿಯ ಸಂಬಂಧಿಯೂ ಆದ ಬಾಲಕ ಆಕೆಯ ಮೇಲೆ ಆರು ತಿಂಗಳಿನಿಂದ ಅನೇಕ ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಯಾರಿಗೂ ವಿಷಯ ತಿಳಿಸದಂತೆ ಬೆದರಿಕೆ ಹಾಕಿದ್ದ ಎಂದು ಸಂತ್ರಸ್ತೆ ವೈದ್ಯರ ಬಳಿ ಹೇಳಿಕೊಂಡಳು. ಬಾಲಕಿಯ ತಂದೆ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಆರೋಪಿಯನ್ನು ನ್ಯಾಯಾಲಯದ ಆದೇಶದಂತೆ ಹಾಸನದ ಬಾಲ ಮಂದಿರಕ್ಕೆ ಕರೆದೊಯ್ದಿದ್ದಾರೆ.

ಸಾವಿನಲ್ಲೂ ಒಂದಾದ ದಂಪತಿ

ರಬಕವಿ-ಬನಹಟ್ಟಿ (ಬಾಗಲಕೋಟೆ): ಬದುಕಿನುದ್ದಕ್ಕೂ ಸುಖ-ದುಃಖಗಳನ್ನು ಹಂಚಿಕೊಂಡು, ಪರಸ್ಪರ ಆಸರೆಯಾಗಿ ಬಾಳಿದ್ದ ದಂಪತಿ ಸಾವಿನಲ್ಲೂ ಒಂದಾಗಿರುವ ಘಟನೆ ಬನಹಟ್ಟಿ ನಗರದಲ್ಲಿ ನಡೆದಿದೆ.



ಸೋಮವಾರ ಪೇಟೆಯ ನಿವಾಸಿ ಸುರೇಶ ಬಾವಲತ್ತಿ (78) ನ.3ರಂದು ಮಧ್ಯಾಹ್ನ 3ಕ್ಕೆ ನಿಧನರಾದರು. ಅನಾರೋಗ್ಯದಿಂದ ಬಳಲುತ್ತಿದ್ದ ಅವರ ಪತ್ನಿ ಮಹಾನಂದಾ ಸುರೇಶ ಬಾವಲತ್ತಿ (69). ಪತಿಯ ಅಗಲಿಕೆ ನೋವಿನಿಂದ ನ.4ರಂದು ಬೆಳಗ್ಗೆ ಕೊನೆಯುಸಿರೆಳೆದರು. ಬುಧವಾರ ಸಂಜೆ ದಂಪತಿಯ ಅಂತ್ಯಕ್ರಿಯೆ ಒಟ್ಟಿಗೆ ನೆರವೇರಿತು.

ಭೂಗತ ಪಾತಕಿ ಹೇಮಂತ್ ಪೂಜಾರಿಗೆ ಉದ್ಯಮಿಗಳ ಮಾಹಿತಿ ನೀಡಿದಾತನ ಬಂಧನ

ಉಡುಪಿ: ಉದ್ಯಮಿಗಳಿಗೆ, ಪ್ರತಿಷ್ಠಿತ ವ್ಯಕ್ತಿಗಳಿಗೆ ಹಣ ನೀಡುವಂತೆ ಬೆದರಿಕೆ ಕರೆ ಮಾಡಲು ಭೂಗತ ಪಾತಕಿ ಹೇಮಂತ್ ಪೂಜಾರಿಗೆ ಉದ್ದಿಮೆದಾರರ ಮೊಬೈಲ್ ಸಂಖ್ಯೆ ನೀಡಿರುವ ಆರೋಪಿಯನ್ನು ಶಿರ್ವ ಪೊಲೀಸರು ಬಂಧಿಸಿದ್ದಾರೆ. ಸಾಂತೂರು ಗ್ರಾಮದ ಹರೀಶ್ ಪೂಜಾರಿ (45) ಬಂಧಿತ ಆರೋಪಿ.



ಭೂಗತ ಪಾತಕಿ ಹೇಮಂತ್ ಪೂಜಾರಿಯು ಪಡುಬಿದ್ರಿ, ಮಣಿಪಾಲ, ಕಾಪು ಮತ್ತು ಶಿರ್ವ ಪೊಲೀಸ್ ಠಾಣೆ ವ್ಯಾಪ್ತಿಯ ಉದ್ದಿಮೆದಾರರನ್ನು ಗುರಿಯಾಗಿಸಿಕೊಂಡು ಅಂತಾರಾಷ್ಟ್ರೀಯ ಸಂಖ್ಯೆಗಳಿಂದ ಕರೆ ಮಾಡಿ ಕೋಟ್ಯಂತರ ರೂ.ಗೆ ಬೇಡಿಕೆ ಇಡುತ್ತಿದ್ದ ಎಂದು ಆರೋಪಿಸಲಾಗಿದೆ.

ಹಣ ನೀಡುವುದಕ್ಕೆ ಹಿಂದೇಟು ಹಾಕಿದರೆ ಮುದರಂಗಡಿ ಉದ್ಯಮಿ ಡೇವಿಡ್ ಡಿಸೋಜ ರೀತಿಯಲ್ಲೇ ಕೊಲೆ ಮಾಡುವುದಾಗಿ ಜೀವ ಬೆದರಿಕೆಯೊಡ್ಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಪಡುಬಿದ್ರಿ, ಮಣಿಪಾಲ, ಕಾಪು ಮತ್ತು ಶಿರ್ವ ಪೊಲೀಸ್ ಠಾಣೆಯಲ್ಲಿ ಒಟ್ಟು 8 ಪ್ರಕರಣಗಳು ದಾಖಲಾಗಿವೆ.

ತಾನು ಹೇಮಂತ್ ಪೂಜಾರಿಗೆ ಉದ್ದಿಮೆ ದಾರರ ಮೊಬೈಲ್ ಸಂಖ್ಯೆ ನೀಡಿದ್ದಾಗಿ ಹರೀಶ್ ಪೂಜಾರಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ಕೃತ್ಯಕ್ಕೆ ಬಳಸಿದ 2 ಮೊಬೈಲ್ ಫೋನ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪುರಸಭೆ ಮುಖ್ಯಾಧಿಕಾರಿ ಲೋಕಾಯುಕ್ತ ಬಲೆಗೆ

ತೇರದಾಳ (ಬಾಗಲಕೋಟೆ): ಕಂಪ್ಯೂಟರ್ ಆಧರಿತ (ಇ-ಸ್ವತ್ತು) ಆಸ್ತಿ ಪಹಣಿ ನೀಡಲು ಮಹಿಳೆಯಿಂದ ಲಂಚ ಕೇಳಿದ ಪ್ರಕರಣದಲ್ಲಿ ಪುರಸಭೆ ಮುಖ್ಯಾಧಿಕಾರಿ ಹಾಗೂ ಇಬ್ಬರು ಗುತ್ತಿಗೆ ಆಧರಿತ ಸಿಬ್ಬಂದಿ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ. ಪಟ್ಟಣದಲ್ಲಿ ತಮ್ಮ ಆಸ್ತಿಗೆ ಪಹಣಿಗಾಗಿ ಮಹಿಳೆ ಪುರಸಭೆ ಮುಖ್ಯಾಧಿಕಾರಿ ಇರ್ಫಾನ್ ಝೂರೆ ಅವರನ್ನು ಸಂಪರ್ಕಿಸಿದ್ದು, ಅವರು ಸಿಬ್ಬಂದಿ ಇಬ್ರಾಹಿಂ ಮಹಾಲಿಂಗಪುರಗೆ 10 ಸಾವಿರ ರೂ. ನೀಡುವಂತೆ ಹೇಳಿದ್ದರು. ಇಬ್ರಾಹಿಂ ಈ ಹಣ ಪಡೆಯುವಂತೆ ಶಿವಾನಂದ ಕಾಂಬಳೆಗೆ ತಿಳಿಸಿದ್ದರು. ಈ ಬಗ್ಗೆ ಮಹಿಳೆ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಪುರಸಭೆಯಲ್ಲಿ ಶಿವಾನಂದ ಮಹಿಳೆಯಿಂದ ಹಣ ಪಡೆಯುವ ವೇಳೆ ಲೋಕಾಯುಕ್ತರು ದಾಳಿ ಮಾಡಿ ಇಬ್ಬರು ಸಿಬ್ಬಂದಿಯನ್ನು ವಶಕ್ಕೆ ಪಡೆದರು. ಬಾಗಲಕೋಟೆ ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ್ದ ಇರ್ಫಾನ್ ಝೂರೆ ಅವರನ್ನು ಅಲ್ಲಿಯೇ ವಶಕ್ಕೆ ಪಡೆದರು.

ನಾಳೆಯವರೆಗೆ ಕೆಲವೆಡೆ ಭಾರಿ ಮಳೆ ಸಾಧ್ಯತೆ

■ **ವಿಕ ಸುದ್ದಿಲೋಕ** ಬೆಂಗಳೂರು

ನೆರೆಯ ಆಂಧ್ರ ಪ್ರದೇಶದಲ್ಲಿ ನೆಲೆಗೊಂಡಿರುವ 'ಮುರಸು' ಚಂಡಮಾರುತದ ಪರಿಣಾಮ ನ.6ರವರೆಗೆ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಬೆಂಗಳೂರಿನ ಹವಾಮಾನ ಕೇಂದ್ರ ಮುನ್ಸೂಚನೆ ನೀಡಿದೆ.



ಬೆಳ್ತಂಗಡಿಯಲ್ಲಿ ಬುಧವಾರ ಸುರಿದ ಭಾರಿ ಮಳೆ.

ಆಂಧ್ರ ಪ್ರದೇಶದ ಕರಾವಳಿ ಭಾಗದಲ್ಲಿ ಚಂಡಮಾರುತದಿಂದಾಗಿ ತೀವ್ರ ವಾಯುಭಾರ ಕುಸಿತವಾಗಿದೆ. ಇದು ಮುಂದಿನ 6 ಗಂಟೆಗಳಲ್ಲಿ ಮತ್ತಷ್ಟು ದುರ್ಬಲಗೊಂಡು ಕಡಿಮೆ ಒತ್ತಡದ ಪ್ರದೇಶವಾಗಿ ಮಾರ್ಪಡಲಿದೆ. ಪರಿಣಾಮ, ನ.6ರವರೆಗೆ ಮೈಸೂರು, ಕೊಡಗು, ಚಾಮರಾಜನಗರ ಹಾಗೂ ಮಂಡ್ಯ ಸೇರಿ ದಕ್ಷಿಣ ಒಳನಾಡು ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಗಂಟೆಗೆ 30-40 ಕಿ.ಮೀ. ವೇಗದ ಬಿರುಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿ ಕರ್ನಾಟಕದಲ್ಲಿ ಗುಡುಗು ಸಹಿತ ಸಾಧಾರಣದಿಂದ ಭಾರಿ ಮಳೆಯಾಗುವ ಸಾಧ್ಯತೆ ಇದೆ.

ಬೆಂಗಳೂರು ನಗರ ಮತ್ತು ಸುತ್ತಮುತ್ತ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದ್ದು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ 29 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ತಾಪಮಾನ 21 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ಇರಲಿದೆ. ರಾಜ್ಯದ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳ ಸಾರ್ವಜನಿಕರು ಹಾಗೂ ರೈತರು ಮಳೆ ಮತ್ತು ಬಿರುಗಾಳಿಯ ಹಿನ್ನೆಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಹವಾಮಾನ ಇಲಾಖೆ ಸೂಚಿಸಿದೆ.

ಕರಾವಳಿಯಲ್ಲಿ ಮುಂದುವರಿದ ಮಳೆ

ಚಂಡಮಾರುತದ ಪರಿಣಾಮ ಬುಧವಾರವೂ ದಕ್ಷಿಣ ಕನ್ನಡ ಹಾಗೂ ಉಡುಪಿ ಭಾಗದ ಹಲವೆಡೆ ಮಳೆಯಾಗಿದೆ. ಮಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬುಧವಾರ ಸಂಜೆ ವೇಳೆ ಕೆಲವು ಭಾಗದಲ್ಲಿ ಉತ್ತಮ ಮಳೆಯಾಗಿದೆ. ಬೆಳ್ತಂಗಡಿ ಸೇರಿದಂತೆ ತಾಲೂಕಿನ ಉಜಿರೆ, ಗುರುವಾಯನಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾರಿ ಮಳೆಯಾಗಿದೆ.

POPULATION RESEARCH CENTRE
An Establishment of the Ministry of Health & Family Welfare, Govt. of India
JSS INSTITUTE OF ECONOMIC RESEARCH
Vidyagiri, Dharwad – 580 004 (Karnataka), Ph. (0836)2468353
Chairman: Dr. D. Veerendra Heggade

WANTED

Applications are invited from the qualified candidates for the post of **Stenographer - 1 Post** (Contractual). For further details on eligibility, pay etc., visit the website : **jssinstitutes.com OR http://jssmcadharwad.com OR https://mohfw.gov.in.**

Last date for receipt of application : 30-11-2026

Dr. Jyoti S. Hallad, Director, PRC/JSS IER Dharwad
Dr. Ajith Prasad, Secretary, Janata Shikshana Samiti Dharwad

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರ ಕಚೇರಿ
ಬೆಂಗಳೂರು ಉತ್ತರ ತಾಲ್ಲೂಕು, ಕಬ್ಬನ್ ಪಾರ್ಕ್,
ಕೆ.ಆರ್.ಸರ್ಕಲ್, ಬೆಂಗಳೂರು-560 001

ಸಂಖ್ಯೆ:ಹಗುಪ/ಇ-ಟೆಂಡರ್/01/2026-27 ದಿನಾಂಕ:02-11-2026

ಕೆರೆಗಳ ಮೀನುಪಾಶುವಾರು ಹಕ್ಕಿನ ಇ-ಟೆಂಡರ್ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕಿನ ಇಲಾಖಾ ವ್ಯಾಪ್ತಿಯ ಈ ಕೆಳಕಂಡ **01** ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು 2026-27 ನೇ ಸಾಲಿನಿಂದ 2030-31 ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ ದಿನಾಂಕ: 01/07/2026 ರಿಂದ 30/06/2031 ರವರೆಗೆ) ಒಟ್ಟು **05** (ಐದು) ವರ್ಷಗಳ ಅವಧಿಗೆ ಇ-ಟೆಂಡರ್ ಮೂಲಕ ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿಯನ್ವಯ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಪೋರ್ಟಲ್ **https://kppp.karnataka.gov.in** ಮೂಲಕ ಟೆಂಡರ್ ಅಹ್ವಾನಿಸಲಾಗಿದೆ. ವಿವರ ಕೆಳಗಿನಂತಿವೆ.

ಕ್ರ. ಸಂ.	ಇ-ಟೆಂಡರ್ ಸಂಖ್ಯೆ	ಕೆರೆ/ ಜಲಸಂಪನ್ಮೂಲದ ಹೆಸರು	ಒಟ್ಟು ಜಲ ವಿಸ್ತೀರ್ಣ ಹೆಕ್ಟೇರ್	ಸರ್ಕಾರಿ ಸವಾಲ್/ ಇ.ಎಂ.ಡಿ (ರೂ.ಗಳಲ್ಲಿ)	ಭದ್ರತಾ ಠೇವಣಿ (ರೂ.ಗಳಲ್ಲಿ)	ನಿಗದಿಪಡಿಸಿದ ಮೀಸಲಾತಿ
1	DOF/2026-27/SE4154	ಕಾಕೋಳು ಕೆರೆ	128.00	433445-00	2880-00	ಸಾಮಾನ್ಯ

ಇ-ಟೆಂಡರ್ ವೇಳಾಪಟ್ಟಿ: 1) ಇ-ಟೆಂಡರ್ ದಸ್ತಾವೇಜು ಪಡೆಯುವ ದಿನಾಂಕ:**02/11/2026**. 2) ಇ-ಟೆಂಡರ್ ಬಿಡ್ ಸಲ್ಲಿಕೆ ಅಂತಿಮ ದಿನಾಂಕ:**16/11/2026** ಸಮಯ **17:30 ಗಂಟೆ**. 3) ಇ-ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ:**11/11/2026** ಸಮಯ **11:00 ಗಂಟೆ**. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:**18/11/2026** ಸಮಯ **11:00 ಗಂಟೆ**. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ:**18/11/2026** ಸಮಯ **11:30 ಗಂಟೆ**.

ವಿ.ಸೂ: ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರ ಕಛೇರಿ, ಬೆಂಗಳೂರು ಉತ್ತರ ತಾಲ್ಲೂಕು ಅಥವಾ ಇ-ಸಂಗ್ರಹಣಾ ಪೋರ್ಟಲ್ **https://kppp.karnataka.gov.in** ಭೇಟಿ ಮಾಡುವುದು.

ಸಹಿ/- ಮೀನುಗಾರಿಕೆ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ
ಸಹಿ/- ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬೆಂಗಳೂರು ಉತ್ತರ ತಾಲ್ಲೂಕು
ಡಿಐಪಿಆರ್/ಸಿಪಿ/3537/ಸಿಸಿಎಲ್/2026-27

STOVE KRAFT LIMITED
Registered Office: #81, Harohalli Industrial Area, Kanakapura Taluk, Ramnagara District - 562112.
Corporate Office: No.30, 2nd Cross, CSI Compound, Mission Road, Bangalore - 560027
Ph.: 080 28016222 | Email: cs@stovekraft.com
Website: www.stovekraft.com
CIN No.: L29301KA1999PLC025387

Q2 Comparison
Revenue 5,846.66 mn +23.2%
EBITDA 753.21 mn +32.7%
PAT 289.78 mn +35.7%

Key financial information (Rs. In million, except per share data)

Sr. No	Particulars	Quarter Ended			Half Year Ended		Year Ended
		30th September 2026	30th June 2026	30th September 2025	30th September 2026	30th September 2025	31st March 2026
		Unaudited	Unaudited	Unaudited	Unaudited	Unaudited	Audited
1	Revenue from Operations	5,846.66	4,805.83	4,744.20	10,652.49	8,145.27	16,074.24
2	EBITDA*	753.21	537.51	567.78	1,290.72	923.99	1,661.35
3	Profit Before Tax	384.58	224.78	271.54	609.36	404.97	509.83
4	Profit After Tax for the period	289.78	170.56	213.61	460.34	317.94	419.91
5	Total Comprehensive Income for the period	288.56	169.35	214.93	457.91	318.06	422.47
6	Paid up Equity Share Capital (Face Value of Rs.10/- each)	331.07	331.07	331.02	331.07	331.02	331.07
7	Earnings per Share** Basic (in Rs.) (Face value of Rs. 10 each)	8.75	5.15	6.46	13.90	9.61	12.69
8	Earnings per Share** Diluted (in Rs.) (Face value of Rs. 10 each)	8.75	5.15	6.45	13.90	9.60	12.69

* Excludes Other Income and Other gains and losses.
***EPS is not annualized except for the year ended March 31, 2026

Note :

a. The above Unaudited Consolidated Financial Results for the quarter and half year ended September 30, 2026, Unaudited Consolidated Statement Of Assets And Liabilities As At September 30, 2026 and Unaudited Consolidated Statement Of Cash Flows for the half year ended September 30, 2026 has been reviewed and recommended by the Audit Committee on November 04, 2026 and thereafter approved by the Board of Directors at their meeting held on November 04, 2026.

b. The Statement of Unaudited Consolidated Financial Results for the quarter and half year ended September 30, 2026, Unaudited Consolidated Statement Of Assets And Liabilities as at September 30, 2026 and Unaudited Consolidated Statement Of Cash Flows For The Half Year Ended September 30, 2026 has been prepared in accordance with the recognition and measurement principles laid down in Accounting Standard 34 "Interim Financial Reporting" ("Ind AS 34") prescribed under Section 133 of Companies Act, 2013, and other accounting principles generally accepted in India, read with the relevant rules issued thereunder and in terms of the Securities and Exchange Board of India (Listing Obligations and Disclosure Requirements) Regulations, 2015 as amended ("Listing Regulations").

c. The above is an extract of the detailed format of unaudited consolidated financial results filed with the stock exchanges under Regulation 33 of the SEBI (Listing Obligations and Disclosure Requirements) Regulations, 2015. The full format of the uaudited consolidated financial results are available on the Stock Exchange websites www.nseindia.com and www.bseindia.com and on the company's website www.stovekraft.com

Date : November 04, 2026
Place : Bengaluru
For detailed results scan the QR Code
For & On Behalf of the Board
Rajendra Gandhi
Managing Director



Govt clears ₹14,500 crore VGF scheme for grid energy storage

POWERING UP. The scheme aims to develop 92 GWh of energy storage capacity

Our Bureau
New Delhi



CLEAN ENERGY PUSH. Union Information and Broadcasting Minister Ashwini Vaishnaw at a briefing in New Delhi ANI

The Cabinet on Wednesday approved the viability gap funding (VGF) scheme for development of grid-scale energy storage systems, with a total financial support of ₹14,500 crore from FY27 to FY31.

The scheme aims to support the development of 92 gigawatt-hour (GWh) of, yet to be commissioned, energy storage capacity across the country.

The scheme will support the creation of new capacities equivalent to 170 per cent of the present-day grid scale energy storage system capacity in the country and help meet the required grid scale ESS capacity of 411 GWh by FY32.

The scheme marks a significant step towards strengthening India's power sector infrastructure, facilitating largescale integration of renewable energy and ensuring reliable, affordable and round-the-clock power supply.

DOMESTIC UNITS

It will also provide an impetus to domestic manufacturing of battery energy storage systems, reduce import dependence and enhance the country's long-term energy security.

The scheme envisages the development of 60 GWh of hydro pumped storage plant (PSP) capacity, 30 GWh of battery energy storage system (BESS) capacity and 2 GWh of capacity through alternative energy storage technologies, with a total estimated investment of ₹97,600 crore.

The VGF support will help improve the financial viability of these projects and accelerate the deployment of largescale energy storage infrastructure in the country.

STORAGE CAPACITY

Energy storage capacity will be allocated through a tariff-based competitive bidding process. Public and private sector electricity distribution companies will be eligible for VGF support for BESS and Hydro PSP projects, while projects based on alternative energy storage technologies will be implemented by public and private sector entities.

A key objective of the scheme is to strengthen India's domestic energy storage manufacturing ecosystem through demand-side financial support and reduce dependence on imported components. To promote indigenous manufacturing, BESS projects will be subject to a minimum domestic content requirement of 40 per cent. The requirement will encourage domestic manufacturing, create opportunities for Indian industry and complement existing supply-side incentives for battery manufacturing.

Services PMI at 4-month high of 55.8 in Oct

Our Bureau
New Delhi



MIXED BAG. The services sector recorded stronger business activity in October, even as employment growth and export order expansion slowed REUTERS

Amid a cautious business environment, India's services sector performed well as the Purchasing Managers' Index (PMI) rose to 55.8 in October, a survey report by S&P Global showed. However, the job market news was less optimistic. PMI was 55.2 in September.

"India's services PMI rose to 55.8 in October, a four-month high, as business conditions improved cautiously," Pranjul Bhandari, HSBC's Chief India Economist, said.

However, not everything was good. Although "overall demand remained strong, new export orders recorded the slowest pace of expansion since February 2023," she said.

The survey results revealed that services companies made inroads into their backlogs. Unfinished business volumes decreased for the third time in the past four months, albeit only moderately. Consequently, employment growth eased during October. The rate of increase was the joint weakest in the current 10-month period of job creation and was only fractional overall.

"Employment growth also slowed to its weakest pace since June, suggesting that some service sector businesses have sufficient capacity to meet current staffing requirements," Bhandari added.

According to the survey report, all four broad areas of the service economy tracked by the PMI survey recorded faster expansions in new business and output, with Finance & Insurance leading in both cases.

Real Estate & Business Services ranked last. Underlying data showed that India's domestic market was the main source of sales growth in October.

EXPORT ORDERS EASE

Although new export business increased, the expansion rate was marginal and the weakest since February 2023.

"Offering respite to firms, input costs rose at a negligible pace that was the weakest in over six years and well below its trend. Some firms reported greater outlays on electricity, labour, raw materials and transportation," the report said.

Cost pressures were most intense in the consumer services segment, the only category to see a stronger upturn in input prices than in September. The softest rate of inflation was in finance & insurance. Fewer than 3 per cent of Indian service providers opted to increase their selling prices at the start of the third fiscal quarter, citing the pass-through of cost rises to clients. Overall rate-of-charge inflation was marginal and the slowest since June.

When asked about the outlook, respondents were confident that output would rise over the coming 12 months. That said, "the level of positive sentiment fell in October and thus remained below its long-run average," the report said.

Nod for ₹2,814-crore scheme to promote domestic critical mineral processing

Our Bureau
New Delhi

The Union Cabinet on Wednesday approved a scheme to promote critical mineral processing to encourage domestic value additional.

It also gave its nod to the continuation of the centrally sponsored scheme for fast track special courts (FTSCs) for expeditious trial of cases of rape and under the Protection of Children from Sexual Offences (POCSO) Act for another five years.

CRITICAL MINERALS

The Cabinet gave its nod to the 'capex support scheme to promote critical mineral processing' with a financial outlay of ₹2,814 crore over a period of five years. It has been formulated to provide targeted capital expenditure support for the establishment and operationalisation of domestic processing facilities. According to an official statement, the scheme aims to develop domestic processing capabilities in India to support value addition within the country, reduce import dependence and develop a value chain. The scheme targets processing of lithium and nickel ores/intermediary products into high purity compounds. Cobalt is expected to be recovered as a byproduct of nickel production. This will support critical sectors such as electric mobility, battery energy storage system (BESS), electronics, defence and speciality steel.

Under the scheme, capital subsidy of 30 per cent of eligible investment will be provided for setting up four critical mineral processing plants, comprising two lithium processing plants (with a minimum capacity of 30 kt each) and two nickel processing plants (with a minimum capacity of 50 kt each). The maximum capital support will be capped at ₹500 crore per lithium beneficiary and ₹900 crore per nickel beneficiary, respectively.

The selection of beneficiaries shall be carried out through a two-stage process.

In the first stage, applications shall be assessed for technical qualification, and only technically qualified applicants shall be eligible to participate in the second stage of financial bidding, the government noted.

For each mineral, two beneficiaries shall be selected based on the least-cost criterion, i.e., the lowest capex support sought by the bidders under the scheme.

The incentives will be disbursed in three tranches linked to the achievement of specified milestones, the statement added.

FAST TRACK COURT

Announcing the Cabinet decisions, Information and Broadcasting Minister Ashwini Vaishnaw said the government is committed to firmly dealing with cases of atrocities against women and children. He said the decision is part of efforts to fully utilise and implement prevailing laws and draft new legislation to deal with such cases. The centrally sponsored scheme for the establishment of FTSCs, including exclusive POCSO (ePOCSO) courts, was introduced in October 2019, following the enactment of the Criminal Law (Amendment) Act, 2018 and the order of the Supreme Court. These courts are dedicated to the time-bound trial and disposal of pending cases related to rape and crimes under the POCSO Act, 2012.

STATISTICAL ECOSYSTEM

The Cabinet also approved a scheme to transform India's official statistical ecosystem, entailing an outlay of ₹4,371.1 crore. The Viksit Bharat Initiative for statistical transformation, analytics and research (VISTAR) scheme spans five years till 2030-31.

According to an official statement, the scheme aims to establish a real-time and future-ready official statistical architecture. The key objectives of the scheme are enhanced timeliness, data granularity, interoperability with harmonised datasets and AI-ready databases.

NLC to sell 10 crore shares in renewable energy arm's IPO

Our Bureau
Chennai

Public sector lignite and power major NLC India on Wednesday approved a proposal to sell up to 10 crore shares in the listing process of its renewable energy arm NLC India Renewables Ltd (NIRL).

NLC's board had approved the ₹4,000-crore IPO earlier this year, and the listing is expected sometime in FY27. It also approved a fundraise of ₹2,500 crore through the issuance of bonds in the nature of debentures.


PROFIT DOWN

The company reported a net profit of ₹465 crore for the quarter ended September 2026, down nearly 2x when compared to ₹921 crore in the same quarter last year.

The profit was impacted by an increase in fuel prices as well as a ₹113 crore benefit in the year-ago quarter due to a change in inventories. Revenue from operations stood at ₹4,732 crore, up from ₹4,178 crore.

Meanwhile, NLC's coal production stood at 78.55 lakh tonnes(lt) for the first half year of FY26, up from 74.87 lt in the same period last fiscal, registering a growth of 4.92 per cent.

Shares of NLC India ended 8.97 per cent higher at ₹250.98 apiece on the NSE.



bob world
Powered by ai

बैंक ऑफ़ बड़ौदा
Bank of Baroda
India's International Bank

Festive hai Season
Khushiyon ka Reason



bob HOME LOAN
@7.40%* p.a.
*T&C Apply
APPLY DIGITALLY
Give a Missed Call: 846 700 1111
Call Toll Free No. (24x7): 1800 5700 / 1800 5000
https://bankofbaroda.bank.in | Follow us on

STOVE KRAFT LIMITED
Registered Office: #81, Harohalli Industrial Area, Kanakapura Taluk, Ramnagara District - 562112,
Corporate Office: No.30, 2nd Cross, CSI Compound, Mission Road, Bangalore - 560027
Ph.: 080 28016222 | Email: cs@stovekraft.com
Website: www.stovekraft.com
CIN No.: L29301KA1999PLC025387

STOVEKRAFT®

Q2 Comparison

Revenue 5,846.66 mn +23.2%
EBITDA 753.21 mn +32.7%
PAT 289.78 mn +35.7%

Key financial information (Rs. In million, except per share data)

Sr. No	Particulars	Quarter Ended			Half Year Ended		Year Ended
		30th September 2026	30th June 2026	30th September 2025	30th September 2026	30th September 2025	31st March 2026
		Unaudited	Unaudited	Unaudited	Unaudited	Unaudited	Audited
1	Revenue from Operations	5,846.66	4,805.83	4,744.20	10,652.49	8,145.27	16,074.24
2	EBITDA*	753.21	537.51	567.78	1,290.72	923.99	1,661.35
3	Profit Before Tax	384.58	224.78	271.54	609.36	404.97	509.83
4	Profit After Tax for the period	289.78	170.56	213.61	460.34	317.94	419.91
5	Total Comprehensive Income for the period	288.56	169.35	214.93	457.91	318.06	422.47
6	Paid up Equity Share Capital (Face Value of Rs.10/- each)	331.07	331.07	331.02	331.07	331.02	331.07
7	Earnings per Share** Basic (in Rs.) (Face value of Rs. 10 each)	8.75	5.15	6.46	13.90	9.61	12.69
8	Earnings per Share** Diluted (in Rs.) (Face value of Rs. 10 each)	8.75	5.15	6.45	13.90	9.60	12.69

* Excludes Other Income and Other gains and losses.
**EPS is not annualized except for the year ended March 31, 2026

Note :

a. The above Unaudited Consolidated Financial Results for the quarter and half year ended September 30, 2026, Unaudited Consolidated Statement Of Assets And Liabilities As At September 30, 2026 and Unaudited Consolidated Statement Of Cash Flows for the half year ended September 30, 2026 has been reviewed and recommended by the Audit Committee on November 04, 2026 and thereafter approved by the Board of Directors at their meeting held on November 04, 2026.

b. The Statement of Unaudited Consolidated Financial Results for the quarter and half year ended September 30, 2026, Unaudited Consolidated Statement Of Assets And Liabilities as at September 30, 2026 and Unaudited Consolidated Statement Of Cash Flows For The Half Year Ended September 30, 2026 has been prepared in accordance with the recognition and measurement principles laid down in Accounting Standard 34 "Interim Financial Reporting" ("Ind AS 34") prescribed under Section 133 of Companies Act, 2013, and other accounting principles generally accepted in India, read with the relevant rules issued thereunder and in terms of the Securities and Exchange Board of India (Listing Obligations and Disclosure Requirements) Regulations, 2015 as amended ("Listing Regulations").

c. The above is an extract of the detailed format of unaudited consolidated financial results filed with the stock exchanges under Regulation 33 of the SEBI (Listing Obligations and Disclosure Requirements) Regulations, 2015. The full format of the unaudited consolidated financial results are available on the Stock Exchange websites www.nseindia.com and www.bseindia.com and on the company's website www.stovekraft.com

Date : November 04, 2026
Place : Bengaluru

For detailed results scan the QR Code

For & On Behalf of the Board
Rajendra Gandhi
Managing Director

Every home deserves 99.9%* Pure Air
AIR PURIFIER
Breathe Clean, Live Healthy



Pigeon
3 -Stage Filtration System
Carbon Filter
Ultra-fine HEPA 13 Filter
Pre-Filter
*T&C Apply

Colour-coded LED Air Quality Indicator
Poor Moderate Good
152 cu. m/h air circulation covers a room of upto 235 sq.ft.
Follow us on: